ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ
ಒಟ್ಟು ಪ್ರಶ್ನೆಗಳು – ೧೫

ಪಟ್ಟಿ–೦೯

# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತನಾಲ್ಕನೆಯ ಅಧಿವೇಶನ

**ಗುರುವಾರ, ದಿನಾಂಕ: ೨೩ನೇ ಸೆಪ್ಟೆಂಬರ್, ೨೦೨೧**

---

**ಸಮೂಹ – IV**

೧. ಮುಖ್ಯಮಂತ್ರಿಗಳು

೨. ಗೃಹ ಸಚಿವರು

೩. ಸಣ್ಣ ನೀರಾವರಿ ಹಾಗೂ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು

೪. ಜಲಸಂಪನ್ಮೂಲ ಸಚಿವರು

೫. ಅಬಕಾರಿ ಸಚಿವರು

೬. ಕಾರ್ಮಿಕ ಸಚಿವರು

---

## ಸಣ್ಣ ನೀರಾವರಿ ಇಲಾಖೆಯಿಂದ ಬಳಕೆಯಾದ ಅನುದಾನ ಕುರಿತು

ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ) –

೧೨೧ (೧೪೩೬) ಸಣ್ಣ ನೀರಾವರಿ ಹಾಗೂ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಸಣ್ಣ ನೀರಾವರಿ ಇಲಾಖೆಯಿಂದ ಕಳೆದ ೩ ವರ್ಷಗಳಲ್ಲಿ ಚಿಕ್ಕಮಗಳೂರು ಜಿಲ್ಲೆಯ ಯಾವ ಯಾವ ಕೆರೆಗಳ ದುರಸ್ತಿ, ಪುನಶ್ಚೇತನ, ಅಭಿವೃದ್ಧಿ ಮತ್ತು ನವೀಕರಣ ಕಾಮಗಾರಿಗಳನ್ನು ಮಾಡಲಾಗಿದೆ ;

(ಆ) ಈ ಕಾಮಗಾರಿಗಳು ಯಾವ ಹಂತದಲ್ಲಿವೆ ; ಈ ಕಾಮಗಾರಿಗಳಿಗಾಗಿ ಮಂಜೂರಾದ ಹಾಗೂ ಬಿಡುಗಡೆಯಾಗಿರುವ ಅನುದಾನವೆಷ್ಟು ; ಇದರಲ್ಲಿ ಗುತ್ತಿಗೆದಾರರಿಗೆ ಬಿಡುಗಡೆ ಮಾಡಿರುವ ಅನುದಾನವೆಷ್ಟು ? (ಕಾಮಗಾರಿವಾರು ವಿವರ ನೀಡುವುದು)

**ರಾಜ್ಯದಲ್ಲಿ ಈವರೆಗೂ ನೋಂದಣಿ ಆಗಿರುವ ಕಾರ್ಮಿಕರ ಸಂಖ್ಯೆ ಕುರಿತು**

**ಶ್ರೀ ಆರ್. ಪ್ರಸನ್ನ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೨೨ (೧೪೨೧) ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಈವರೆಗೂ ನೋಂದಣಿ ಆಗಿರುವ ಕಾರ್ಮಿಕರ ಸಂಖ್ಯೆ ಎಷ್ಟು ;

(ಆ) ನೋಂದಣಿ ಆಗದೆ ಇರುವ ಕಟ್ಟಡ ಮತ್ತು ವಲಸೆ ಕಾರ್ಮಿಕರ ಸಂಖ್ಯೆ ಎಷ್ಟು ;

(ಇ) ರಾಜ್ಯದಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣದ ಕಾರ್ಮಿಕರಿಗೆ ಮೀಸಲಿಟ್ಟಿರುವ ಅನುದಾನ ಎಷ್ಟು ;

(ಈ) ೨೦೦೬ ರಿಂದ ೨೦೦೭ನೇ ಸಾಲಿನವರೆಗೆ ಕಟ್ಟಡ ಮಾಲೀಕರಿಂದ ಸೆಸ್ (ಕರ) ರೂಪದಲ್ಲಿ ಸಂಗ್ರಹವಾದ ಹಣ ಎಷ್ಟು ?

**ಕೆರೆ ಒತ್ತುವರಿ ಕುರಿತು**

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) –**

೧೨೩ (೧೩೧೨) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೆಂಗಳೂರು ನಗರದಲ್ಲಿ ಎಷ್ಟು ಕೆರೆ ಒತ್ತುವರಿ ಪ್ರಕರಣಗಳು ಸರಕಾರದ ಗಮನಕ್ಕೆ ಬಂದಿವೆ ; ಯಾವ ಯಾವ ಕೆರೆಗಳನ್ನು ಒತ್ತುವರಿ ಮಾಡಲಾಗಿದೆ ; (ವಿವರ ನೀಡುವುದು)

(ಆ) ಕೆರೆ ಒತ್ತುವರಿ ಮೂಲಕ ಎಷ್ಟು ಎಕರೆ ಜಾಗವನ್ನು ಒತ್ತುವರಿ ಮಾಡಲಾಗಿದೆ ; ಈ ಜಾಗದ ಮಾರುಕಟ್ಟೆ ಮೌಲ್ಯವೆಷ್ಟು ; ಈ ಕೆರೆಗಳನ್ನು ಒತ್ತುವರಿ ಮಾಡಿದವರು ಯಾರು ಮತ್ತು ಎಷ್ಟು ಒತ್ತುವರಿ ಮಾಡಿರುತ್ತಾರೆ ; (ವಿವರ ನೀಡುವುದು)

(ಇ) ಕೆರೆ ಒತ್ತುವರಿ ಮಾಡುವ ಮೂಲಕ ವಸತಿ ಸಮುಚ್ಚಯ/ವಾಣಿಜ್ಯ ಸಂಕೀರ್ಣ/ ಲೇಔಟ್‌ಗಳನ್ನು ನಿರ್ಮಿಸಿರುವ ಎಷ್ಟು ಪ್ರಕರಣಗಳು ಸರಕಾರದ ಗಮನಕ್ಕೆ ಬಂದಿವೆ ; ಈ ಒತ್ತುವರಿದಾರರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ ; (ವಿವರ ನೀಡುವುದು)

(ಈ) ಕೆರೆ ಒತ್ತುವರಿ ಮಾಡುವ ಮೂಲಕ ವಸತಿ ಸಮುಚ್ಚಯ/ವಾಣಿಜ್ಯ ಸಂಕೀರ್ಣ/ ಲೇಔಟ್‌ಗಳನ್ನು ನಿರ್ಮಿಸಿ ಮಾರಾಟ ಮಾಡಿ ನೋಂದಣಿ ಮಾಡಿರುವ ಎಷ್ಟು ಪ್ರಕರಣಗಳು ಸರಕಾರದ ಗಮನಕ್ಕೆ ಬಂದಿವೆ ; ಈ ರೀತಿಯಾಗಿ ಕೆರೆ ಒತ್ತುವರಿ ಮಾಡಿ ನಿರ್ಮಿಸಿರುವ ಸ್ಥಳಾವಕಾಶಗಳನ್ನು ಮಾರಾಟ/ಖರೀದಿ ನೋಂದಣಿ ಮಾಡಿರುವ ಎಷ್ಟು ಉಪ ನೋಂದಣಾಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗಿದೆ ?

## ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಬಿಡುಗಡೆಗೊಳಿಸಲಾದ ಅನುದಾನ ಕುರಿತು

**ಶ್ರೀ ಬಿ.ಎಂ. ಫಾರೂಖ್ (ವಿಧಾನಸಭೆಯಿಂದ ಚುನಾಯಿತರಾದವರು) –**

**ಶ್ರೀ ನಸೀರ್ ಅಹ್ಮದ್ (ವಿಧಾನಸಭೆಯಿಂದ ಚುನಾಯಿತರಾದವರು) –**

೧೨೪ (೧೪೪೫+೧೪೦೮) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕರ್ನಾಟಕ ಅಲ್ಪಸಂಖ್ಯಾತರ ನಿರ್ದೇಶನಾಲಯದಿಂದ ರಾಜ್ಯದ ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ರೂಪಿಸಿರುವ ಯೋಜನೆಗಳಾವುವು ; ಸದರಿ ಯೋಜನೆಗಳಿಗೆ ಕಳೆದ ೫ ವರ್ಷಗಳಲ್ಲಿ ಬಿಡುಗಡೆ ಮಾಡಿರುವ ಅನುದಾನವೆಷ್ಟು ; ಅವುಗಳಲ್ಲಿ ಖರ್ಚಾದ ಅನುದಾನವೆಷ್ಟು ; (ಯೋಜನಾವಾರು ಮಾಹಿತಿ ಒದಗಿಸುವುದು)

(ಆ) ೨೦೧೯–೨೦೨೦ ಹಾಗೂ ೨೦೨೦–೨೦೨೧ನೇ ಸಾಲಿನಲ್ಲಿ ಸದರಿ ಯೋಜನೆಗಳಿಗೆ ಬಿಡುಗಡೆ ಮಾಡಲಾದ ಅನುದಾನದ ಮೊತ್ತದಲ್ಲಿ ಸುಮಾರು ಮೊತ್ತವನ್ನು ಕಡಿತಗೊಳಿಸಿರುವುದು ನಿಜವೇ ; ಹೌದಾದಲ್ಲಿ, ಎಷ್ಟು ಮೊತ್ತ ಕಡಿತಗೊಳಿಸಲಾಗಿದೆ ; (ಯೋಜನಾವಾರು ಮಾಹಿತಿ ಒದಗಿಸುವುದು)

(ಇ) ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ಹಾಗೂ ಕರ್ನಾಟಕ ಅಲ್ಪಸಂಖ್ಯಾತರ ಆಯೋಗದ ನಾಮನಿರ್ದೇಶಿತ ನಿರ್ದೇಶಕರು/ಸದಸ್ಯರುಗಳನ್ನು ಸರ್ಕಾರ ನೇಮಿಸಿದೆಯೇ ; ಇಲ್ಲದಿದ್ದಲ್ಲಿ, ಕಾರಣವೇನು ; ಯಾವ ಕಾಲಮಿತಿಯೊಳಗೆ ನೇಮಿಸಲಾಗುವುದು ?

**ಮೀಸಲಾತಿ ಬದಲಾವಣೆಗೆ ಇರುವ ನಿಯಮಾವಳಿಗಳ ಕುರಿತು**

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) –**

೧೨೫ (೧೪೧೭) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಖಾಲಿ ಹುದ್ದೆಗಳನ್ನು ಭರ್ತಿ ಮಾಡಬೇಕಾದ ಸಂದರ್ಭದಲ್ಲಿ ಮೀಸಲಾತಿಯನ್ನು ಅನುಸರಿಸುವ ಕುರಿತು ಇರುವ ನಿಯಮಾವಳಿಗಳೇನು ; (ಪಟ್ಟಿ ನೀಡುವುದು) ಮೀಸಲಾತಿ ಹಾಗೂ ಒಳ ಮೀಸಲಾತಿಗಳ ಸಂಖ್ಯೆ ಎಷ್ಟು ; ಮತ್ತು ಅವು ಯಾವುವು ; (ವರ್ಟಿಕಲ್ ಹಾಗೂ ಹಾರಿಜಂಟಲ್ ಮೀಸಲಾತಿ)

(ಆ) ಮೀಸಲಾತಿ ಹಾಗೂ ಒಳ ಮೀಸಲಾತಿ ಬದಲಾವಣೆಗೆ ಇರುವ ಅವಕಾಶಗಳೇನು ; ಇದ್ದಲ್ಲಿ, ಯಾವ ಯಾವ ಮೀಸಲಾತಿಗಳಿಗೆ ಬದಲಾವಣೆ ಮಾಡುವ ಅವಕಾಶವಿದೆ ;

(ಇ) ಹುದ್ದೆಗಳ ಭರ್ತಿಗೆ ಒಂದು ಬಾರಿ ಅಥವಾ ಒಂದಕ್ಕಿಂತ ಹೆಚ್ಚು ಬಾರಿ ಅರ್ಜಿ ಆಹ್ವಾನಿಸಿದ್ದಲ್ಲಿ, ನಿಗದಿಪಡಿಸಿದ ಮೀಸಲಾತಿಗೆ ಯಾವುದೇ ಅಭ್ಯರ್ಥಿಯು ಅರ್ಜಿ ಹಾಕದೇ ಹೋದಲ್ಲಿ ಅಂತಹ ಹುದ್ದೆಗಳನ್ನು ಮೀಸಲಾತಿ ಬದಲಾವಣೆ ಮಾಡಿ ಹುದ್ದೆಯನ್ನು ಭರ್ತಿ ಮಾಡಲು ಅವಕಾಶವಿದೆಯೇ ; ಈ ಕುರಿತು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಲ್ಲಿನ ಸೇವಾ ನಿಯಮಗಳೇನು ;

(ಈ) ಬದಲಾವಣೆಗೆ ಅವಕಾಶ ಇಲ್ಲದೇ ಹೋದಲ್ಲಿ, ಅವಕಾಶ ಮಾಡಿಕೊಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ? (ವಿವರವನ್ನು ನೀಡುವುದು)

## ಪ್ರಚಾರ ಫಲಕಗಳ ಜಾಹೀರಾತಿನ ಬಗ್ಗೆ

**ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ (ನಾಮನಿರ್ದೇಶನ ಹೊಂದಿದವರು) –**

೧೨೬ (೧೪೪೩) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ೨೦೨೦–೨೧ ಮತ್ತು ೨೦೨೧–೨೨ನೇ ಸಾಲಿನಲ್ಲಿ ಇದುವರೆಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ವತಿಯಿಂದ ಜಾಹೀರಾತು ಪ್ರಚಾರ ಫಲಕಗಳ (Display Advertisement through Hoardings) ಮೂಲಕ ನೀಡಿರುವ ಜಾಹೀರಾತುಗಳು ಎಷ್ಟು ; ಯಾವ ಏಜೆನ್ಸಿಗಳಿಗೆ ನೀಡಲಾಗಿದೆ ; ಅವುಗಳ ಒಟ್ಟು ಅಂದಾಜು ವೆಚ್ಚ ಎಷ್ಟು ;

(ಆ) ೨೦೨೧–೨೨ರಲ್ಲಿ Display Advertisement through Hoardings ಕುರಿತು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮೇಲೆ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಕೇಸ್‌ಗಳು ದಾಖಲಾಗಿವೆಯೇ ; ಏಕೆ ದಾಖಲಾಗಿದೆ ? (ವಿವರ ನೀಡುವುದು)

## ಕಾರ್ಮಿಕ ಇಲಾಖೆಯಿಂದ ಕಾರ್ಮಿಕರಿಗೆ ನೀಡಲಾಗುವ ಫುಡ್ ಕಿಟ್ ಕುರಿತ ಮಾಹಿತಿ

**ಶ್ರೀ ಕೆ. ಹರೀಶ್ ಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) –**

೧೨೭ (೧೩೪೪) ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಾರ್ಮಿಕ ಇಲಾಖೆಯಿಂದ ಕಾರ್ಮಿಕರಿಗೆ ಆಹಾರ ಪೊಟ್ಟಣ (Food Kit) ಹಂಚಿಕೆ ಸಂಬಂಧಿಸಿದಂತೆ ಪ್ರತಿ ಆಹಾರ ಪೊಟ್ಟಣಕ್ಕೆ ನಿಗದಿಪಡಿಸಲಾದ ಬೆಲೆ ಎಷ್ಟು ;

(ಆ) ಇದುವರೆಗೆ ಎಷ್ಟು ಮಂದಿ ಕಾರ್ಮಿಕರಿಗೆ ಆಹಾರ ಪೊಟ್ಟಣ (Food Kit) ಹಂಚಿಕೆ ಮಾಡಲಾಗಿದೆ ; ಸರ್ಕಾರದಿಂದ ಮಂಜೂರಾದ ಒಟ್ಟು ಅನುದಾನವೆಷ್ಟು ; ಇದುವರೆಗೆ ಖರ್ಚಾದ ಅನುದಾನವೆಷ್ಟು ? (ಸಂಪೂರ್ಣ ವಿವರದೊಂದಿಗೆ ಮಾಹಿತಿ ಒದಗಿಸುವುದು)

## ಖಜಾನೆಗೆ ಕಟ್ಟಬೇಕಾದ ಪೋಲೀಸ್ ಇಲಾಖೆಯ ಹಣವನ್ನು ದುರ್ಬಳಕೆ ಮಾಡಿರುವ ಬಗ್ಗೆ

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೨೮ (೧೩೫೦) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ದಿನಾಂಕ:೧೦.೦೭.೨೦೨೧ರಂದು ಹಲವು ದಿನಪತ್ರಿಕೆಗಳಲ್ಲಿ ಕೊಡಗು ಜಿಲ್ಲೆಯ ಪೋಲೀಸ್ ಇಲಾಖೆಯಿಂದ ಖಜಾನೆಗೆ ಕಟ್ಟಬೇಕಾಗಿದ್ದ ಹಣವನ್ನು ಸಿಬ್ಬಂದಿಗಳು ಲೂಟಿ ಮಾಡಿರುವುದಾಗಿ ವರದಿಯಾಗಿರುವುದು ನಿಜವೆ ; ಹಾಗಿದ್ದಲ್ಲಿ, ವಿವರ ನೀಡುವುದು ;

(ಆ) ಈ ಹಣವನ್ನು ದುರ್ಬಳಕೆ ಮಾಡಿಕೊಂಡ ಸಿಬ್ಬಂದಿಗಳ ಮೇಲೆ ಕೈಗೊಂಡ ಕ್ರಮಗಳೇನು ; ಮುಂದೆ ಬೇರೆ ನೌಕರರುಗಳು ಈ ರೀತಿಯ ಅಪರಾಧ ಮಾಡದಂತೆ ತಡೆಯಲು ಸರ್ಕಾರವು ತೆಗೆದುಕೊಂಡ ಕಠಿಣ ಕ್ರಮಗಳೇನು ; ವಿವರ ನೀಡುವುದು ?

## ಕಟ್ಟಡ ಕಾರ್ಮಿಕರ ಕಲ್ಯಾಣ ನಿಧಿಯ ಬಗ್ಗೆ

**ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶನ ಹೊಂದಿದವರು) –**

೧೨೯ (೧೩೦೨) ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಟ್ಟಡ ಹಾಗೂ ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣಕ್ಕಾಗಿ ಮೀಸಲಿಟ್ಟಿರುವ ಕಾರ್ಮಿಕ ಕಲ್ಯಾಣ ನಿಧಿಯ ಎಷ್ಟು ಹಣವನ್ನು ಲಸಿಕೆ ಕಾರ್ಯಕ್ರಮಕ್ಕೆ ಉಪಯೋಗಿಸಿಕೊಳ್ಳಲಾಗಿದೆ ;

(ಆ) ಕಾರ್ಮಿಕ ಕಲ್ಯಾಣ ಇಲಾಖೆಯ ಹಣವನ್ನು ಕಾರ್ಮಿಕರ ಕಲ್ಯಾಣಕ್ಕೆ ಅಲ್ಲದೆ ಇತರೆ ಯೋಜನೆಗಳಿಗೆ ಉಪಯೋಗಿಸುವುದು ಕಾರ್ಮಿಕರಿಗೆ ಅನ್ಯಾಯ ಮಾಡಿದಂತಾಗುವುದಿಲ್ಲವೆ ?

## ಕೆ.ಎಸ್.ಆರ್.ಪಿ. ಘಟಕದ ಕ್ಯಾಂಟೀನ್‌ನಲ್ಲಿ ನಡೆದ ಅವ್ಯವಹಾರದ ಬಗ್ಗೆ

**ಶ್ರೀ ಅಡಗೂರ್ ಹೆಚ್. ವಿಶ್ವನಾಥ್ (ನಾಮನಿರ್ದೇಶನ ಹೊಂದಿದವರು) –**

೧೩೦ (೧೩೦೯) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಮಾಂಡೆಂಟ್ ಒಂದನೇ ಪಡೆ ಕೆ.ಎಸ್.ಆರ್.ಪಿ. ಬೆಂಗಳೂರು ರವರ ಘಟಕದಲ್ಲಿ ನಡೆಸುತ್ತಿರುವ ಕ್ಯಾಂಟೀನ್ (ಊಟ ಮತ್ತು ಉಪಹಾರ) ನಲ್ಲಿ ದಿನಾಂಕ:೧.೧.೨೦೧೦ ರಿಂದ ೨೦.೦೮.೨೦೧೫ರ ಅವಧಿಯಲ್ಲಿ ನಡೆದ ವ್ಯವಹಾರದಲ್ಲಿ ರೂ.೨೭,೫೫,೬೫೦/–ಗಳ ಹಣ ದುರುಪಯೋಗ ಆಗಿರುವುದು ಆಂತರಿಕ ಲೆಕ್ಕಪರಿಶೋಧನೆಯಲ್ಲಿ ಬೆಳಕಿಗೆ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಸದರಿ ವರದಿ ಅನ್ವಯ ಸಂಬಂಧಪಟ್ಟ ಆರೋಪಿತ ಅಧಿಕಾರಿಗಳ ವಿರುದ್ಧ ಕೈಗೊಂಡ ಶಿಸ್ತಿನ ಕ್ರಮವೇನು ; ಹಾಗೂ ದುರುಪಯೋಗಗೊಂಡ ೨೭,೫೫,೬೫೦/– ರೂ.ಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಂದ ವಸೂಲಿ ಮಾಡಿ ಸರ್ಕಾರಕ್ಕೆ ಜಮಾ ಮಾಡಲಾಗಿದೆಯೇ ;

(ಇ) ರೂ.೨೭,೫೫,೬೫೦/– ದುರುಪಯೋಗಪಡಿಸಿಕೊಂಡು ಆರ್ಥಿಕ ಅಪರಾಧವೆಸಗಿದ ಅಧಿಕಾರಿಗಳ ವಿರುದ್ಧ ಅಪರಾಧ ಮೊಕದ್ದಮೆಯನ್ನು ಇದುವರೆಗೂ ಹೂಡದಿರಲು ಕಾರಣವೇನು ? (ಕ್ರಮ ಕೈಗೊಂಡಿದ್ದಲ್ಲಿ, ದಾಖಲೆಗಳ ಸಹಿತ ವರದಿ ನೀಡುವುದು)

## ಬೆಂಗಳೂರು–ಮೈಸೂರು ರಸ್ತೆಯ ಕೆಂಗೇರಿ ಬಳಿ ವೃಷಭಾವತಿ ನದಿ ತಡೆಗೋಡೆ ಕುಸಿತದ ಕುರಿತು

**ಶ್ರೀ ಯು.ಬಿ. ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು) –**

೧೩೧ (೧೧೫) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೆಂಗಳೂರು–ಮೈಸೂರು ರಸ್ತೆಯ ಕೆಂಗೇರಿ ಬಳಿ ವೃಷಭಾವತಿ ನದಿಗೆ ನಿರ್ಮಿಸಿದ್ದ ತಡೆಗೋಡೆ ಕುಸಿತದಿಂದಾಗಿ ಸಾರ್ವಜನಿಕರ ಸುಗಮ ಸಂಚಾರಕ್ಕೆ ಅಡಚಣೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಕಳೆದ ಎರಡು ವರ್ಷಗಳಿಂದ ತಡೆಗೋಡೆ ನಿರ್ಮಾಣ ಕಾಮಗಾರಿ ನಿಧಾನಗತಿಯಲ್ಲಿ ಸಾಗಲು ಕಾರಣಗಳೇನು ;

(ಇ) ಇದರಿಂದ ವಾಹನ ಸಂಚಾರಕ್ಕೆ ಅಡಚಣೆಯುಂಟಾಗಿದ್ದು ತ್ವರಿತಗತಿಯಲ್ಲಿ ಕಾಮಗಾರಿ ಮುಕ್ತಾಯಗೊಳಿಸಲು ಕ್ರಮ ಕೈಗೊಳ್ಳಲಾಗುವುದೇ ?

## ಪೊಲೀಸ್ ಇಲಾಖೆಯ ನಿವೃತ್ತ ಲಿಪಿಕ ವರ್ಗದ ಸಿಬ್ಬಂದಿಗೆ ಆರೋಗ್ಯ ಭಾಗ್ಯ ಯೋಜನೆ ವಿಸ್ತರಿಸುವ ಬಗ್ಗೆ

ಶ್ರೀ ಅ. ದೇವೇಗೌಡ (ಪದವೀಧರರ ಕ್ಷೇತ್ರ) –

೧೩೨ (೧೩೫೨) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಪೊಲೀಸ್ ಇಲಾಖೆಯ ನಿವೃತ್ತ ಲಿಪಿಕ ವರ್ಗದ ಸಿಬ್ಬಂದಿಯವರಿಗೆ "ಆರೋಗ್ಯ ಭಾಗ್ಯ ಯೋಜನೆ"ಯ ಸೌಲಭ್ಯವನ್ನು ವಿಸ್ತರಿಸಲು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಪೊಲೀಸ್ ಇಲಾಖೆಯ ನಿವೃತ್ತ ಲಿಪಿಕ ವರ್ಗದ ಸಿಬ್ಬಂದಿಯವರಿಗೆ "ಆರೋಗ್ಯ ಭಾಗ್ಯ ಯೋಜನೆ" ಸೌಲಭ್ಯವನ್ನು ವಿಸ್ತರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ? (ವಿವರ ನೀಡುವುದು)

## ಎಸಿಬಿ ಹಾಗೂ ಲೋಕಾಯುಕ್ತದಲ್ಲಿ ದಾಖಲಾದ ಪ್ರಕರಣಗಳ ಬಗ್ಗೆ

ಶ್ರೀ ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –

೧೩೩ (೧೩೮೯) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಕಳೆದ ನಾಲ್ಕು ವರ್ಷಗಳಿಂದ ಎಸಿಬಿ ಹಾಗೂ ಲೋಕಾಯುಕ್ತದಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆ ಎಷ್ಟು ; ಅವು ಯಾವುವು ; (ಸೂಕ್ತ ವಿವರ ನೀಡುವುದು)

(ಆ) ಕಳೆದ ೪ ವರ್ಷಗಳಿಂದ ಎಷ್ಟು ಸರ್ಕಾರಿ ಅಧಿಕಾರಿಗಳ ಮೇಲೆ ಎಸಿಬಿ ಹಾಗೂ ಲೋಕಾಯುಕ್ತದಲ್ಲಿ ಪ್ರಕರಣಗಳು ದಾಖಲಾಗಿದೆ ; (ಪ್ರಕರಣಗಳ ಬಗ್ಗೆ ಮಾಹಿತಿ ನೀಡುವುದು)

(ಇ) ಕಳೆದ ೪ ವರ್ಷಗಳಿಂದ ರಾಜ್ಯದ ಪಿಡಿಒ (ಪಂಚಾಯಿತಿ ಅಭಿವೃದ್ಧಿ ಅಧಿಕಾರಿ)ಗಳ ಮೇಲೆ ದಾಖಲಾದ ಪ್ರಕರಣಗಳ ಸಂಖ್ಯೆ ಎಷ್ಟು ? (ಪ್ರಕರಣಗಳ ಬಗ್ಗೆ ಜಿಲ್ಲಾವಾರು ಮಾಹಿತಿ ನೀಡುವುದು)

**ಅಪ್ರಾಪ್ತ ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರದ ಬಗ್ಗೆ**

~~**ಸರ್ಕಾರದ ಗಮನದ ಬಗ್ಗೆ**~~

**ಶ್ರೀ ಮಾನೆ ಶ್ರೀನಿವಾಸ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೩೪ (೧೪೫೧) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯಾದ್ಯಂತ ಇತ್ತೀಚೆಗೆ ಅಪ್ರಾಪ್ತ ಹೆಣ್ಣುಮಕ್ಕಳ ಮೇಲೆ ಹಾಗೂ ಮಹಿಳೆಯರ ಮೇಲೆ ಉಂಟಾಗುತ್ತಿರುವ ಅತ್ಯಾಚಾರದ ಪ್ರಕರಣಗಳು ಸರಕಾರದ ಗಮನಕ್ಕೆ ಬಂದಿದೆಯೇ ;

(ಆ) ಅತ್ಯಾಚಾರಕ್ಕೆ ಒಳಗಾದ ಸಂತ್ರಸ್ತೆಯರಿಗೆ ಸರಕಾರದಿಂದ ಸಾಂತ್ವನ ಅಥವಾ ಪರಿಹಾರ ಧನವನ್ನು ನೀಡಲಾಗಿದೆಯೇ ;

(ಇ) ರಾಜ್ಯಾದ್ಯಂತ ಇತ್ತೀಚೆಗೆ ಅಪ್ರಾಪ್ತ ಹೆಣ್ಣು ಮಕ್ಕಳ ಮೇಲೆ ಹಾಗೂ ಮಹಿಳೆಯರ ಮೇಲೆ ಅತ್ಯಾಚಾರವನ್ನು ಮಾಡಿ, ಹೀನಕೃತ್ಯವನ್ನು ನಡೆಸಿರುವ ಕ್ರೂರಿ ಆರೋಪಿಗಳ ವಿರುದ್ಧ ಸರಕಾರ ಕೈಗೊಂಡ ಕ್ರಮಗಳೇನು ;

(ಈ) ರಾಜ್ಯಾದ್ಯಂತ ದಿನೇ ದಿನೇ ಹೆಚ್ಚಳವಾಗುತ್ತಿರುವ ಅತ್ಯಾಚಾರ ಪ್ರಕರಣಗಳನ್ನು ತಡೆಗಟ್ಟಲು ಹಾಗೂ ಮಹಿಳೆಯರ ಸುರಕ್ಷತೆಗಾಗಿ ಸರಕಾರ ಕೈಗೊಂಡ ಕ್ರಮಗಳೇನು ?

**ಕಲ್ಯಾಣ ಕರ್ನಾಟಕ ಭಾಗದ ಹುದ್ದೆಗಳನ್ನು ಭರ್ತಿ ಮಾಡುವ ಕುರಿತು**

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) –**

೧೩೫ (೧೪೩೯) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ೩೭೧ಜೆ ಸ್ಥಾನಮಾನದ ನಂತರ ಕಲ್ಯಾಣ ಕರ್ನಾಟಕ ಭಾಗದ ಸರ್ಕಾರದ ವಿವಿಧ ಇಲಾಖೆಗಳಿಗೆ ಇಲ್ಲಿಯವರೆಗೆ ಎಷ್ಟು ಮಂದಿಯನ್ನು ಯಾವ ಯಾವ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲಾಗಿದೆ ; (ಇಲಾಖಾವಾರು ಹಾಗೂ ವರ್ಷವಾರು ಮಾಹಿಂತಿ ಒದಗಿಸುವುದು)

(ಆ) ಪ್ರಸ್ತುತ ಸದರಿ ಭಾಗಕ್ಕೆ ಸೇರಿದ ಸರ್ಕಾರಿ ಇಲಾಖೆಗಳಲ್ಲಿ ಖಾಲಿಯಿರುವ ಹುದ್ದೆಗಳ ಸಂಖ್ಯೆ ಎಷ್ಟು ; (ಇಲಾಖಾವಾರು ಹುದ್ದೆವಾರು ವಿವರ ನೀಡುವುದು)

(ಇ) ಖಾಲಿಯಿರುವ ಈ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ಸ್ಪಷ್ಟವಾದ ಮಾಹಿಂತಿಯನ್ನು ಒದಗಿಸುವುದು)

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ಕಾ.ಸೂ..373/ಪಿ5

List of Questions
for Oral Answers

**LIST - 09**

Total No. of
Questions - 15

# KARNATAKA LEGISLATIVE COUNCIL

## ONE HUNDRED AND FORTY-FOURTH SESSION

## Thursday, the 23rd September, 2021

---

**GROUP - IV**

1. Chief Minister
2. Minister for Home
3. Minister for Minor Irrigation and Law, Parliamentary Affairs and Legislation
4. Minister for Water Resources
5. Minister for Excise
6. Minister for Labour

---

**GRANT UTILISED BY THE MINOR IRRIGATION DEPARTMENT**

**Sri S.L. Bojegowda (Teachers' Constituency) -**

121 (1436) Will the Minister for Minor Irrigation and Law, Parliamentary Affairs and Legislation be pleased to state:-

a. the particulars of the tanks in which repair, rejuvenation, development and renovation works have been done in Chikkamagaluru district by the Minor Irrigation department for the last three years;

b. the present stage of the works; the grant which has been sanctioned and released for the works; out of which, the grant released to contractors? (workwise details be furnished)

## NUMBER OF REGISTERED WORKERS

**Sri R. Prasanna Kumar (Local Authorities Constituency) -**

122 (1421) Will the Minister for Labour be pleased to state:-

a. the number of registered workers in the State so far;

b. the number of unregistered building and migrant workers;

c. the grant earmarked to building and other construction workers in the State;

d. the amount collected in the form of cess (tax) by the building owners from the year 2006 to 2007?

## LAKE ENCROACHMENT

**Sri N. Ravi Kumar (Elected by Legislative Assembly) -**

123 (1312) Will the Chief Minister be pleased to state:-

a. the number of lake encroachment cases in Bengaluru have come to the notice of the Government; the particulars of lakes which have been encroached; (details be furnished)

b. the extent of acres of land has been encroached by encroaching the lakes; the market value of the said land; the persons who encroached these lakes and the extent of land has been encroached; (details be furnished)

c. the number of cases which have come to the notice of the Government that apartment/commercial complex/ layouts have been constructed by encroaching the lakes; the action that has been taken against the encroachers; (details be furnished)

d. the number of cases which have come to the notice of the Government that apartment/commercial complex / layouts have been constructed, sold and registered by encroaching the lakes; the number of sub-registrars on whom the action has been taken who have involved in sale/purchase and registration of the constructed places by encroaching such lakes?

## GRANT RELEASED FOR DEVELOPMENT OF MINORITIES

**Sri B.M. Farooq (Elected by Legislative Assembly) -**

**Sri Naseer Ahmed (Elected by Legislative Assembly) -**

124 (1445+1408) Will the Chief Minister be pleased to state:-

a. the particulars of schemes chalked out for the development of Minorities of the State by the Directorate of Minorities; the grant released in the last 5 years for the said schemes; out of which, the grant spent for the same; (schemewise information be furnished)

b. whether it is true that most of the grant curtailed in the grant released to the said schemes during the year 2019-20 and 2020-21; if so, the grant that has been curtailed; (schemewise information be furnished)

c. whether the Government has appointed the nominated Directors/member of Karnataka Minorities Development Corporation and Karnataka State Minorities Commission; if not, the reason therefor; the timelimit within which they would be appointed?

## EXISTING RULES FOR MODIFICATION OF RESERVATION

**Sri Arun Shahapur (Teachers' Constituency) -**

125 (1417) Will the Chief Minister be pleased to state:-

a. the existing rules with regard to comply with the reservation during the filling up of vacant posts; (list be furnished) the number of reservation and internal reservation; and the particulars thereof; (vertical and horizontal reservation)

b. the provisions prevailing to modify the reservation and internal reservation; if so, the provision is existed for which modifications can be made to various reservations;

c. the application invited for the first time or more than once for filling up of the posts, whether there is a

provision to fill up post by modifying the reservation when any student has not applied to the prescribed reservation posts; the service rules in the department of Personnel and Administrative Reforms in this regard;

d. if there is no provision for modification, the actions taken by the Government for making the provision in this regard? (details be furnished)

## DISPLAY ADVERTISEMENT THROUGH HOARDINGS

**Sri Mohan Kumar Kondajji (Nominated) -**

126 (1443) Will the Chief Minister be pleased to state:-

a. the number of advertisements have given through display advertisement through Hoardings by the department of Information and Public Relations during the year 2020-21 and 2021-22 to till date; the name of the agencies to which it has been entrusted; the total estimated cost thereof;

b. whether the cases have been filed in the High Court of Karnataka against the department of Information and Public Relations regarding display Advertisements through hoardings during the year 2021-22; the reason for filing the case? (details be furnished)

## FOOD KIT TO WORKERS FROM LABOUR DEPARTMENT

**Sri K. Harish Kumar (Elected by Legislative Assembly) -**

127 (1344) Will the Minister for Labour be pleased to state:-

a. the price which has been fixed to each food kit with regard to distribution of food kit to workers by Labour department;

b. the number of workers to whom food kit has been distributed till date; the grant sanctioned by the Government; the grant spent till date? (complete details be furnished)

## MISUSE OF AMOUNT OF POLICE DEPARTMENT

**Sri M.P.Sunil Subramani (Local Authorities Constituency) -**

128 (1350) Will the Minister for Home be pleased to state:-

a. whether it is true that the staff of Police department of Kodagu district have looted the amount which has to be remitted to the treasury was reported in many news papers on 10.07.2021; if so, the details be furnished;

b. the actions taken against the staff who misused the amount; the stringent actions taken by the Government to prevent other employees from such offence in future? (details be furnished)

## WELFARE FUND OF BUILDING WORKERS

**Sri Prakash K. Rathod (Nominated) -**

129 (1302) Will the Minister for Labour be pleased to state:-

a. the amount of Labour Welfare fund has been utilised for vaccination which is reserved for the welfare of building and other construction workers;

b. whether it would not a injustice caused to the labours that utilising the fund of the Labour Welfare Department to other schemes instead of using to welfare of labours?

## IRREGULARITY IN K.S.R.P. UNIT CANTEEN

**Sri Adagur H. Vishwanath (Nominated) -**

130 (1309) Will the Minister for Home be pleased to state:-

a. whether it has come to the notice of the Government that irregularity of 27,55,650/- rupees occurred in canteen (meals and Tiffin)from 01.01.2010 to 20.08.2015 running in commandant 1st Batallion of KSRP unit Bengaluru has come to light in internal audit;

b. if so, the disciplinary action taken against the concerned alleged officers as per the report; and whether the

misused amount of 27,55,650/- has been deposited to the Government after recovering from the concerned officers;

c. the reason for not lodging a criminal case against the officers who committed fiscal offence by misusing of Rs.27,55,560/- till date? (if action taken in this regard, the report alongwith the documents be furnished)

## COLLAPSE OF RETAINING WALL ON VRISHABHAVATI RIVER NEAR KENGERI

**Sri U.B. Venkatesh (Nominated) -**

131 (115) Will the Chief Minister be pleased to state:-

a. whether it has come to the notice of the Government that the interruption caused to the vehicle movement of public due to the retaining wall constructed on Vrishabhavati river near Kengeri of Bengaluru-Mysuru Road is collapsed;

b. if so, the reasons for construction of retaining wall work is going at snail's pace for the last 2 years;

c. whether the action would be taken to complete the work quickly due to interruption caused to the vehicular movement?

## EXTENSION OF AROGYA BHAGYA SCHEME TO RETIRED MINISTERIAL STAFF OF POLICE DEPARTMENT

**Sri A. Devegowda (Graduates' Constituency) -**

132 (1352) Will the Minister for Home be pleased to state:-

a. whether it has come to the notice of the Government that the proposal is submitted to the Government for extending the facilities of the "Arogya Bhagya Scheme" to retired ministerial staff of the Police department;

b. whether the action would be taken by the Government for extending facilities of "Arogya Bhagya Scheme" to retired ministerial staff? (details be furnished)

## CASES REGISTERED IN ACB AND LOKAYUKTA

**Sri M. Narayanaswamy (Local Authorities Constituency) -**

133 (1389) Will the Minister for Home be pleased to state:-

a. the number of cases registered in ACB and Lokayukta in the State for the last 4 years; particulars of the same; (appropriate information be furnished)

b. the number of officers against to whom the cases have been registered in ACB and Lokayukta for the last 4 years; (information regarding cases be furnished)

c. the number of cases registered against the PDO (Panchayat Development Officer) of the State for the last 4 years? (districtwise information about the cases be furnished)

## ATTENTION OF THE GOVERNMENT ABOUT RAPE ON MINOR GIRL CHILD

**Sri Mane Shrinivas (Local Authorities Constituency) -**

134 (1451) Will the Minister for Home be pleased to state:-

a. whether it has come to the notice of the Government that the number of rape cases being occurred on minor girls and women recently in the State;

b. whether the Government has given any consolation or compensation to the rape victims;

c. the actions taken by the Government against the cruel criminals who committed brutal act after rape on minor girls and women recently across the State;

d. the measures taken by the Government for protection of women and prevention of rape cases increasing day by day in the State?

## FILL UP THE VACANCIES IN KALYANA KARNATAKA REGION

**Sri Raghunath Rao Malkapure (Elected by Legislative Assembly) -**

135 (1439) Will the Chief Minister be pleased to state:-

a. the number of persons of Kalyana Karnataka region have been appointed to various posts in several departments of the Government after 371 (J) reservation so far; (departmentwise and yearwise information be furnished)

b. the number of posts lying vacant in the Government department belonging to the said region at present; (departmentwise postwise details be furnished)

c. the steps taken by the Government to fill up the vacant posts? (complete information be furnished)

**K.R. MAHALAKSHMI**
Secretary
Karnataka Legislative Council

Government Press, Vikasa Soudha Unit, Bengaluru - WD - 373 - 750 Copies